ಈ
ಉ } ಕಳೆದ ಐದು ವರ್ಷಗಳಲ್ಲಿ ಪ್ರತಿವರ್ಷವಾರು ಲಾಭ ಮತ್ತು ನಷ್ಟ ಈ ಕೆಳಕಂಡಂತೆ ಇದೆ.
(ಲಕ್ಷ ರೂ.ಗಳಲ್ಲಿ)

ವರ್ಷ	ಲಾಭ		ನಷ್ಟ
೧೯೬೫-೬೬	—	(—)	೨೧೬.೫೮
೧೯೬೬-೬೭ (+)	೪೪.೮೭		—
೧೯೬೭-೬೮	—	(—)	೮೫.೯
೧೯೬೮-೬೯ (+)	೩೯.೨೯		—
೧೯೬೯-೭೦ (+)	೯೫.೧೮		—

ಊ) ಸರ್ಕಾರವು ಕಂಪನಿಯು ಪ್ರಗತಿಯು ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದೆ.

ಋ) ಇಲ್ಲ.

ರಾಜ್ಯದ ಜನಸಂಖ್ಯೆ ಸ್ಫೋಟಕ್ಕನುಗುಣವಾಗಿ ಕೆ.ಎಸ್.ಆರ್.ಟಿ.ಸಿ. ಸೌಲಭ್ಯ

೪೨೩. (೬೮೩) ಶ್ರೀ ಬಿ. ಹೆಚ್. ಬನ್ನಿಕೋಡ್ (ಹಿರೇಕೆರೂರು).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ರಾಜ್ಯದ ಜನಸಂಖ್ಯಾ ಸ್ಫೋಟಕ್ಕನುಗುಣವಾಗಿ ಕೆ.ಎಸ್.ಆರ್.ಟಿ.ಸಿ. ಸಾರ್ವಜನಿಕರಿಗೆ ಸಾರಿಗೆ ಸೌಕರ್ಯ ಸಮರ್ಪಕವಾಗಿ ಒದಗಿಸಲು ಸಾಧ್ಯವಿಲ್ಲ ಅನ್ನುವುದನ್ನು ಸರ್ಕಾರ ಮನಗೊಂಡಿದೆಯೆ?

ಆ) ಸಮರ್ಪಕ ಸಾರ್ವಜನಿಕ ಸಾರಿಗೆ ಸೌಕರ್ಯಕ್ಕಾಗಿ ಸರ್ಕಾರದ ನೀತಿ ಮತ್ತು ಕಾರ್ಯಕ್ರಮಗಳೇನು ?

ಇ) ರಾಷ್ಟ್ರೀಕೃತ ಮಾರ್ಗಗಳನ್ನು ಖಾಸಗೀಕರಣಗೊಳಿಸಿ ಸಮರ್ಪಕ ಸಾರಿಗೆ ವ್ಯವಸ್ಥೆಯನ್ನು ನೊಂದ ಸಾರ್ವಜನಿಕರಿಗೆ ಒದಗಿಸಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು).—

ಅ) ಹೌದು.

ಆ) ಹಳೆಯ ವಾಹನಗಳ ಬದಲಾವಣೆ ಮತ್ತು ಹೆಚ್ಚುತ್ತಿರುವ ಸಾರ್ವಜನಿಕ ಬೇಡಿಕೆಗನುಗುಣವಾಗಿ ಸೇವೆಗಳನ್ನು ಯೋಜಿತ ರೀತಿಯಲ್ಲಿ ಒದಗಿಸುವುದು.

ಇ) ಖಾಸಗೀಕರಣವು ಸೇರಿದಂತೆ ನಿಶ್ಚಿತ ಸಾರಿಗೆ ನೀತಿಯನ್ನು ರೂಪಿಸಲು ಪರಿಶೀಲಿಸಲಾಗುತ್ತಿದೆ.

ಸರ್ಕಾರದವರು ನೇಮಿಸಿದ ಆಯೋಗಗಳ ಸಂಖ್ಯೆ

೪೨೪ (೬೯೭) ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ೧-೧-೧೯೬೦ ರಿಂದ ಸರ್ಕಾರದವರು ನೇಮಿಸಿದ ಆಯೋಗಗಳೆಷ್ಟು ?

ಆ) ಯಾವ ಯಾವ ಕಾರಣಗಳಿಗೋಸ್ಕರ ಆವುಗಳನ್ನು ನೇಮಕ ಮಾಡಲಾಗಿದ್ದಿತು ?

ಇ) ಅವುಗಳಲ್ಲಿ ಎಷ್ಟು ಆಯೋಗಗಳು ವರದಿಗಳನ್ನು ಕೊಟ್ಟಿವೆ

ಈ) ಎಷ್ಟು ವರದಿಗಳನ್ನು ಜಾರಿಗೊಳಿಸಲಾಗಿವೆ ಹಾಗೂ ಆವುಗಳು ಯಾವುವು ?

ಉ) ಮೇಲ್ಕಂಡ ಎಲ್ಲಾ ಆಯೋಗಗಳಿಗೆ ಆಗಿರುವ ಖರ್ಚೆಷ್ಟು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು),—

ಅ) ೧೦ (ಹತ್ತು)

ಆ) ಅನುಬಂಧ ''ಅ'' ದಲ್ಲಿ ನೀಡಲಾಗಿದೆ.

ಇ) ೭

ಈ) ೨ (ವಿವರ ಅನುಬಂಧ ''ಆ'' ದಲ್ಲಿ ನೀಡಲಾಗಿದೆ)

ಉ) ಒಟ್ಟು ರೂ. ೫೩.೦೨ ಲಕ್ಷಗಳು (ಇದರಲ್ಲಿ ಪಕ್ಕ ವಿಚಾರಣಾ ಆಯೋಗಕ್ಕೆ ಸಂಬಂಧಿಸಿದಂತೆ ಮೀಜ್ಜೆ ರೂ. ೨೨.೮೫ ಲಕ್ಷ ರೂ. ಗಳು ದಿನಾಂಕ ೧೮-೧೯೯೩ ರಂತೆ)

ಅನುಬಂಧ—''ಅ''

೧) ನ್ಯಾಯಮೂರ್ತಿ ಶ್ರೀ ಕೆ. ಭಕ್ತವತ್ಸಲ ವಿಚಾರಣಾ ಆಯೋಗವನ್ನು ದಿನಾಂಕ ೧೫-೧೦-೯೦ ರಂದು ಗುಲ್ಬರ್ಗಾ ನಗರದ ಬ್ರಹ್ಮಾಪುರ ಪೋಲೀಸ್ ಠಾಣೆಯ ಲಾಕಪ್‌ನಲ್ಲಿ ಶ್ರೀ ವಲ್ಲಿಕಾರ್ಜುನ ಇವರ ಸಾವಿನ ಬಗ್ಗೆ.

೨) ಶ್ರೀ ಎಸ್. ಬಿ. ಹುಗಾರ್ ವಿಚಾರಣಾ ಆಯೋಗವನ್ನು ಗುಲ್ಬರ್ಗಾ ಜಿಲ್ಲೆಯ ಕೂಡಲ ಹಂಗರದಲ್ಲಿ ದಿನಾಂಕ ೪-೫-೧೯೯೦ ರಂದು ನಡೆದ ಗುಂಪು ಘರ್ಷಣೆಯಲ್ಲಿ ೯ ಜನರು ಸಾವಿಗೀಡಾಗಿ ಇತರೇ ೧೦ ಜನರು ತೀರ್ವವಾಗಿ ಗಾಯಗೊಂಡ ಬಗ್ಗೆ.

೩) ಶ್ರೀ ಎಸ್. ಆರ್. ವೆಂಕಟರಾಮು ವಿಚಾರಣಾ ಆಯೋಗವನ್ನು ಬಳ್ಳಾರಿ ಜಿಲ್ಲೆಯ ಸಂಗನಕಲ್ ಗ್ರಾಮದಲ್ಲಿ ದಿನಾಂಕ ೨೯-೪-೧೯೯೦ ರಂದು ಹರಿಜನರ ಮೇಲೆ ನಡೆದ ದೌರ್ಜನ್ಯದ ಬಗ್ಗೆ.

೪) ನ್ಯಾಯಮೂರ್ತಿ ಶ್ರೀ ಕೆ. ಆರ್. ಪ್ರಸಾದ್‌ರಾವ್ ವಿಚಾರಣಾ ಆಯೋಗವನ್ನು ದಿನಾಂಕ ೨೯-೯-೧೯೯೦ ರಂದು ರಾಮನಗರದಲ್ಲಿ ನಡೆದ ಕೋಮು ಗಲಭೆಗಳಲ್ಲಿ ೫ ಜನರ ಸಾವಿನ ಬಗ್ಗೆ.

೫ ನ್ಯಾಯಮೂರ್ತಿ ಹೆಚ್. ಎನ್, ನಾರಾಯಣ್ ವಿಚಾರಣಾ ಆಯೋಗವನ್ನು ದಿನಾಂಕ ೧೧-೧೧-೯೧ ರಂದು ಮೈಸೂರು ಜಿಲ್ಲೆಯ ಸರಗೂರು ಗ್ರಾಮದಲ್ಲಿ ನಡೆದ ಗುಂಪು ಘರ್ಷಣೆಯಲ್ಲಿ ೭ ಜನರ ಸಾವಿನ ಬಗ್ಗೆ.

೬) ನ್ಯಾಯಮೂರ್ತಿ ಶ್ರೀ ಎನ್. ಡಿ. ವೆಂಕಟೇಶ್ ವಿಚಾರಣಾ ಆಯೋಗವನ್ನು ದಿನಾಂಕ ೧೨, ೧೩, ೧೪-೧೨-೧೯೯೧ ರಂದು ಬೆಂಗಳೂರು ನಗರದಲ್ಲಿ ಕಾವೇರಿ ನೀರಿನ ವಿವಾದಕ್ಕೆ ಸಂಬಂಧಿಸಿದಂತೆ ನ್ಯಾಯಮಂಡಳಿಯ ಮಧ್ಯಂತರ ತೀರ್ಪನ್ನು ಪ್ರತಿಭಟಿಸಿ ನಡೆದ ಹಿಂಸಾತ್ಮಕ ಘಟನೆಗಳ ಬಗ್ಗೆ.

೭) ನ್ಯಾಯಮೂರ್ತಿ ಶ್ರೀ ಎಂ. ಎಸ್. ಪಾಟೀಲ್ ವಿಚಾರಣಾ ಆಯೋಗವನ್ನು ದಿನಾಂಕ ೮-೬-೯೨ ರಂದು ಕುಣಿಗಲ್‌ನಲ್ಲಿ ನಡೆದ ಪೊಲೀಸ್ ಗೋಲಿಬಾರ್ ಬಗ್ಗೆ.

೮) ನ್ಯಾಯಮೂರ್ತಿ ಶ್ರೀ ಕೆ. ಜಗನ್ನಾಥಶೆಟ್ಟಿ ವಿಚಾರಣಾ ಆಯೋಗವನ್ನು ಏಪ್ರಿಲ್ ೧೯೯೩ರ ನಂತರ ಭಟ್ಕಳ್ ನಗರದಲ್ಲಿ ನಡೆದ ಪ್ರಕರಣಗಳ ಬಗ್ಗೆ.

೯) ಶ್ರೀ ಬಿ. ಕೆ. ಸಂಗಲದ್ ವಿಚಾರಣಾ ಆಯೋಗವನ್ನು ದಿನಾಂಕ ೨೪-೧೦-೧೯೯೪ ರಂದು ಗುಲ್ಬರ್ಗಾ ನಗರದಲ್ಲಿ ಪೋಲೀಸ್ ಬಲ ಪ್ರಯೋಗದ ಬಗ್ಗೆ,

೧೦) ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ಪಕ್ಕ ವಿಚಾರಣಾ ಆಯೋಗ (ಕಂದಾಯ ಇಲಾಖೆ)

ಅನುಬಂಧ—''ಆ''

೧) ಶ್ರೀ ಎಸ್. ಆರ್. ವೆಂಕಟರಾಮು ವಿಚಾರಣಾ ಆಯೋಗ.

೨) ಶ್ರೀ ಎಸ್. ಬಿ. ಹುಗಾರ್ ವಿಚಾರಣಾ ಆಯೋಗ.